# ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.

**ಅಸಲು ದಾವಾ ನಂ : 248/2019** **ದಿನಾಂಕ : 22-08-2022**
**ಪಿ.ಡಬ್ಲ್ಯೂ : 1**

**:ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು:**

*******

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್ .ಜಿ ರವರಿಂದ:-**

4. ಸಿದ್ದಲಿಂಗ ನಾಯಕರಿಗೆ ಒಟ್ಟು 5 ಜನ ಮಕ್ಕಳು. ಸಿದ್ದಲಿಂಗ ನಾಯಕ ನನಗೆ ತಂದೆಯಾಗಬೇಕು. ಸದರಿ ಸಿದ್ದಲಿಂಗ ನಾಯಕರಿಗೆ ನಾನು, ಸಿದ್ದಮ್ಮ, ಗಂಗಮ್ಮ, ಗೌರಮ್ಮ, ದೇವೀರಿ ಮತ್ತು ಯಶೋಧ ಮಕ್ಕಳಾಗಿರುತ್ತೇವೆ. ಸದರಿ ಎಲ್ಲ ಮಕ್ಕಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೇವೀರಿ ಮತ್ತು ಸಿದ್ದಮ್ಮ ಮರಣ ಹೊಂದಿರುತ್ತಾರೆ. ಸಿದ್ದಮ್ಮ ರವರಿಗೆ ಒಬ್ಬ ಮಗನಿದ್ದು ಅವರು ಈಗ ಮರಣ ಹೊಂದಿರುತ್ತಾರೆ. ಸದರಿ ಇಬ್ಬರ ಮಕ್ಕಳು ಇರುವ ದಾಖಲಾತಿಯ ಜೊತೆ ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ವೆಗೈರೆ ಮಾಡಲು ಸಕಲೇಶಪುರದ ಎಸಿ ಕೋರ್ಟ್ ನಲ್ಲಿ ಅಪೀಲು ಸಲ್ಲಿಸಿದ್ದೆನು. ಸದರಿ ಅಪೀಲು ಏನಾಗಿದೆ ಎಂದರೆ ಕಳುಹಿಸುತ್ತೇವೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಸದರಿ ಅಪೀಲು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಯಾವ ಆಧಾರದ ಮೇಲೆ ಆಗಿರುತ್ತದೆ ಪರಿಶೀಲನೆ ಮಾಡಿ ನೋಡಿರುತ್ತೇನೆ. ಪ್ರತಿವಾದಿ ಖಾತೆಯನ್ನು ಮೋಸದಿಂದ ಮಾಡಿರುತ್ತಾರೆ. ಪ್ರತಿವಾದಿಯ ಹೆಸರಿಗೆ ಅವರ ತಂದೆ ಮರಣ ನಂತರ ಪೌತಿ ಅಧಾರದ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ಯಾವ ರೀತಿ ಆಸ್ತಿ ಬಂದಿರುತ್ತದೆ ಎಂದು ನನಗೆ ಗೂತ್ತಿಲ್ಲ.

5. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಚೆಕ್ಕುಬಂದಿ ಪ್ರಮಾಣ ಪತ್ರ ಇಳುವರಿ ಪ್ರಮಾಣ ಪತ್ರ ಹಾಜರು ಮಾಡಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಹಾಜರು ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ಪ್ರಮಾಣ ಪತ್ರಗಳನ್ನು ಹಾಜರು ಮಾಡದಿದ್ದರು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಇನಾಮತಿ ಮಂಜೂರಾತಿಯಾದ ಆದೇಶ ಹಾಜರು ಪಡಿಸಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಈಗಾಗಲೇ ಹಾಜರು ಮಾಡಿದ್ದೆನೆ ಎಂದು ನುಡಿಯುತ್ತಾರೆ. ಇನಾಂ ಆದೇಶದ ಪ್ರಕಾರ ನನ್ನ ತಂದೆಗೆ ಮಂಜೂರಾತಿಯಾಗಿತ್ತು. ಪುನರ್ ಮಂಜೂರಾತಿಯು ನನ್ನ ತಂದೆಗೆ ಆಗಿತ್ತು. ಇನಾಂ ಆದೇಶ ಮತ್ತು ಮಂಜೂರಾತಿ ಒಬ್ಬರ ಹೆಸರಿಗೆ ಆಗುವುದಿಲ್ಲ, ನನ್ನ ತಂದೆಯ ಹೆಸರಿಗೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಪುನರ್ ಮಂಜೂರಾತಿಯಾದ ಆದೇಶ ಜಾರಿಯಾಗದ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ಸದರಿ ಆದೇಶದ ಆಧಾರದ ಮೇಲೆ ನಾನು ದಾವಾ ಸ್ವತ್ತಿನ ಹಕ್ಕು

ಮತ್ತು ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಆಗಿತ್ತು, ನನ್ನ ಹೆಸರಿಗೆ ಆಗಿರುವುದಿಲ್ಲ. ದಾವಾ ಜಮೀನಿನಲ್ಲಿ ಹಲಸು, ಮಾವು, ಬೀಟೆ ಮತ್ತು ತೇಗದ ಎಷ್ಟು ಮರಗಳು ಇರುತ್ತವೆ ಎಂದು ದಾಖಲೆ ಹಾಜರು ಮಾಡಿರಬಹುದು. ನನಗೆ ಓದಲು ಬರುವುದಿಲ್ಲ. ನಿಪಿ-23 ರಲ್ಲಿ ಎಷ್ಟು ಮರಗಳು ಇರುತ್ತವೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೆ, ಹದ್ದುಬಸ್ತು, ಸ್ಕೆಚ್ಚು ಮತ್ತು ಪೋಡಿಯಾದ ಬಗ್ಗೆ ದಾಖಲೆಗಳು ನನ್ನ ತಂದೆಯ ಬಳಿ ಇದ್ದು ಈಗ ಅವು ಸುಟ್ಟು ಹೋಗಿರುತ್ತವೆ. ಸದರಿ ದಾಖಲೆಗಳು ಸಂಬಂಧಪಟ್ಟ ಕಚೇರಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ದಾಖಲೆಗಳನ್ನು ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

6. ನನ್ನ ಹೆಸರಿನಲ್ಲಿ ಬಾವಿ ಇರದ ಕಾರಣ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 2000 ನೇ ಇಸವಿಯಿಂದ ಪಹಣಿಯಲ್ಲಿ ನನ್ನ ತಂದೆಯ ಹೆಸರು ಬರುತ್ತಿಲ್ಲ ಎಂದು 5 ವರ್ಷಗಳ ಹಿಂದೆ ನನಗೆ ತಿಳಿದುಬಂದಿರುತ್ತದೆ. ಪ್ಯಾರಾ ನನ್ನ ಮುಖ್ಯ ವಿಚಾರಣೆಯ 2 ನೇ ಪ್ಯಾರಾದ ಕೊನೆಯಲ್ಲಿ ನನ್ನ ತಂದೆ ಸಿದ್ದಲಿಂಗ ನಾಯಾಕ ಎಂದು ನಮೂದಾಗುವ ಬದಲು ತಳವಾರಿಕೆ ಇನಾಂ ಎಂದು ತಪ್ಪಾಗಿ ನಮೂದಾಗಿದೆ ಎಂದು ಬರೆಸಿದ್ದು ತಳವಾರಿಕೆ ಇನಾಂ ಎಂದು ಬರೆದಿರುವುದು ತಪ್ಪು ಇರುತ್ತದೆಯೇ ಎಂದರೆ ಸಾಕ್ಷಿಯು ಬರವಣಿಗೆ ತಪ್ಪಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನಾನು ತಹಶೀಲ್ದಾರವರಿಗೆ ಯಾವುದೇ ಅರ್ಜಿ ನೀಡಿಲ್ಲ ಮತ್ತು ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲು ಓ ಎಸ್ ನಂ.21/2018 ರನ್ನು ನಿರ್ಬಂಧಕಾಜ್ಞೆ ಆದೇಶ ಕೋರಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಮಕ್ಕಳನ್ನು ಸೇರ್ಪಡೆ ಮಾಡಿಲ್ಲ ಎಂದು ವಾಪಸ್ಸು ಪಡೆದು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದಿನ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ**

(ಪ್ರಸನ್ನಕುಮಾರ್ ಸಿ.)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ಬೇಲೂರು.**